## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2020-21ನೇ ಸಾಲಿನ ಅನುಮೋದಿತ ಎಸ್.ಸಿ.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ:-

1. ಸಮಾಜ ಕಲ್ಯಾಣ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಕ ಇ 186 ಎಸ್.ಎಲ್.ಪಿ 2020, ದಿನಾಂಕ: 10.06.2020ರಲ್ಲಿನ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 28.05.2020ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ರಾಜ್ಯ ಅಭಿವೃದ್ಧಿ ಪರಿಷತ್ತಿನ ನಡವಳಿಗಳು.
2. ಸಮ ಸಂಖ್ಯೆಯ ಪತ್ರ ದಿನಾಂಕ: 08.07.2020.
3. ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಪತ್ರ ಸಂಖ್ಯೆ: ಆಇ 147 ವೆಚ್ಚ-8/2019, ಬೆಂಗಳೂರು, ದಿನಾಂಕ:30.05.2020.

### ಪ್ರಸ್ತಾವನೆ

ಮೇಲೆ(1)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿದಿನಾಂಕ: 28.05.2020ರಂದು ನಡೆದ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ರಾಜ್ಯ ಅಭಿವೃದ್ಧಿ ಪರಿಷತ್ತಿನ ನಡವಳಿಗಳನ್ನು ಕಳುಹಿಸುತ್ತಾ, ಅನುಮೋದಿತ ಕ್ರಿಯಾ ಯೋಜನೆಯಂತೆ ಸೂಕ್ತ ಕ್ರಮ ಜರುಗಿಸಿ ಅನುಮೋದಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕೋರಿದ್ದಾರೆ.

ಮೇಲೆ(2)ರಲ್ಲಿ ಓದಲಾದ ಪತ್ರದಲ್ಲಿ ಆಯಾ ವಿಶ್ವವಿದ್ಯಾಲಯಕ್ಕೆ ನಿಗದಿಪಡಿಸಿದ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನಕ್ಕೆ ಸಂಬಂಧಪಟ್ಟಂತೆ ಪರಿಷತ್ ಅನುಮೋದಿಸಿದ ಈ ಕೆಳಕಂಡ ಗರಿಷ್ಠ ಮೂರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಕ್ರಿಯಾ ಯೋಜನೆ ಸಲ್ಲಿಸಲು ತಿಳಿಸಲಾಗಿತ್ತು.

1. ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯಗಳಲ್ಲಿನ ಪ.ಜಾ/ಪ.ಪಂ. ದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟದ ವೆಚ್ಚ ಭರಿಸುವುದು.
2. ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಮಾಸಿಕ ಗರಿಷ್ಠ ರೂ.10,000.00 ಶಿಷ್ಯ ವೇತನ ನೀಡುವುದು.(ವಿಶ್ವವಿದ್ಯಾಲಯ/ಸ್ನಾತಕೋತ್ತರ ಕೇಂದ್ರ/ಕೇಂದ್ರ ಸಂಯೋಜಿತ ಇತ್ಯಾದಿ ಕಾಲೇಜುಗಳಲ್ಲಿ ಪಿ.ಹೆಚ್.ಡಿ. ಆಯ್ಕೆ ಮಾಡಿದ ವಿದ್ಯಾರ್ಥಿಗಳಿಗೆ
3. ಸರ್ಕಾರಿ ಆದೇಶದಂತೆ ಶುಲ್ಕ ಮರುಪಾವತಿ( ಕುಟುಂಬದ ವಾರ್ಷಿಕ ಅದಾಯ ರೂ.2.50 ಲಕ್ಷದಿಂದ ಮೇಲ್ಪಟ್ಟು ರೂ.10.00 ಲಕ್ಷದವರೆಗೆ ವಿದ್ಯಾರ್ಥಿಗಳಿಗೆ ಶೇ.50 ರಷ್ಟು ಶುಲ್ಕ ಮರುಪಾವತಿ ಮಾಡುವುದು)

ಮೇಲೆ(3)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿಯಲ್ಲಿ 2020-21ನೇ ಸಾಲಿನ ಆಯವ್ಯಯದಲ್ಲಿ ಯೋಜನೆಗಳಿಗೆ ಎದುರಾಗಿ ಒದಗಿಸಿರುವ ಅನುದಾನವನ್ನು ಪರಿಷ್ಕರಿಸಲಾಗಿದ್ದು, ಇವುಗಳ ಪೈಕಿ ಕೆಲವು ಕಾರ್ಯಕ್ರಮಗಳಿಗೆ ಹಣ ಬಿಡುಗಡೆಯ ಅಧಿಕಾರವನ್ನು ಆಡಳಿತ ಇಲಾಖೆಗೆ ನೀಡಿದೆ ಹೀಗೆ ಹಣ ಬಿಡುಗಡೆ ಅಧಿಕಾರವನ್ನು ಪ್ರತ್ಯಾಯೋಜಿಸಿರುವ ಯೋಜನೆಗಳ ಎದುರಾಗಿ ಮುಂದಿನ 06 ತಿಂಗಳುಗಳಲ್ಲಿ ಅಂದರೆ ನವೆಂಬರ್ 2020ರವರೆಗೆ ಪರಿಷ್ಕೃತ ಅಂದಾಜಿನ ಅರ್ಧದಷ್ಟು ಮೊತ್ತವನ್ನು ಮಾತ್ರ ಬಳಸಿಕೊಳ್ಳಲು ಅನುಮತಿ ನೀಡಿದೆ. ಮುಂದುವರೆದು, ಆಡಳಿತ ಇಲಾಖೆಗೆ ಅನುದಾನವನ್ನು ಬಿಡುಗಡೆ ಮಾಡುವ ಅಧಿಕಾರವನ್ನು ಪ್ರತ್ಯಾಯೋಜಿಸುವ ಯೋಜನೆಗಳಲ್ಲಿ ಲಭ್ಯವಿರುವ ಅನುದಾನವನ್ನು ಬಾಕಿ ಇರುವ ಬಿಲ್ಲುಗಳನ್ನು ತೀರುವಲ್ಲಿ ಮಾಡಲು ಮೊದಲ ಆದ್ಯತೆ ನೀಡಲು ತಿಳಿಸಿದೆ. ಯಾವುದೇ ಹೊಸ ಯೋಜನೆ/ಕಾರ್ಯಕ್ರಮ/ಕಾಮಗಾರಿ ಕೈಗೊಳ್ಳುವ ಮುನ್ನ ಆರ್ಥಿಕ ಇಲಾಖೆಯ ಸಹಮತಿಯನ್ನು ಕಡ್ಡಾಯವಾಗಿ ಪಡೆಯಬೇಕೆಂದು ಸ್ಪಷ್ಟ ಪಡಿಸಿದೆ.

Scanned with CamScanner

ಮೇಲ್ಕಂಡ ಅಂಶಗಳ ಆಧಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 85 ಹೆಚ್‌ಪಿಯು 2020, ಬೆಂಗಳೂರು, ದಿನಾಂಕ: 03.08.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2020-21ನೇ ಸಾಲಿಗೆ ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ವಿಶ್ವವಿದ್ಯಾಲಯ ಶಿಕ್ಷಣಕ್ಕೆ (ರಾಜ್ಯ ವಲಯ ಯೋಜನೆಗಳು) ಸಂಬಂಧಿಸಿದಂತೆ ಈ ಆದೇಶಕ್ಕೆ ಲಗತ್ತಿಸಿದ ಅನುಬಂಧದಲ್ಲಿರುವಂತೆ ಅನುಮೋದಿತ ಎಸ್.ಸಿ.ಪಿ/ಟಿ.ಎಸ್.ಪಿ ಕಾರ್ಯಕ್ರಮಗಳಿಗೆ ಮೊದಲ ತ್ರೈಮಾಸಿಕ ಕಂತಿನ ಅನುದಾನವನ್ನು ಈ ಕೆಳಗಿನ ಷರತ್ತುಗಳನ್ನು ಪಾಲಿಸಬೇಕೆಂಬ ನಿಬಂಧನೆಯನ್ನು ವಿಧಿಸಿ ಸರ್ಕಾರ ಬಿಡುಗಡೆ ಮಾಡಿದೆ.

- ದಿನಾಂಕ: 10.04.2018, ಸಂಖ್ಯೆ:ಇಡಿ 110 ಡಿಆರ್‌ಸಿ 2018ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

- ವೆಚ್ಚ ಮಾಡುವ ಮುನ್ನ ಕಾರ್ಯಕ್ರಮ ಅನುಷ್ಠಾನಗೊಳಿಸುವ ಅಧಿಕಾರಿಗಳು ಈ ಹಿಂದಿನ ಸಾಲಿನ ಆದೇಶದಲ್ಲಿ ತಿಳಿಸಿದಂತೆ ಎಲ್ಲಾ ನಿಯಮಗಳನ್ನು ಪಾಲಿಸಲು ಸೂಚಿಸಿದೆ.

- ಆರ್ಥಿಕ ಮಿತವ್ಯಯ ಆದೇಶ ಹಾಗೂ ವೆಚ್ಚಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಪಾಲಿಸುವುದು.

- ಅನುದಾನ ಬಿಡುಗಡೆಗೆ ಸಂಬಂಧಿತ ಜಿ.ಐ.ಎ ಬಿಲ್ಲನ್ನು ಸಂಬಂಧಿತ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರು, ಸಲ್ಲಿಸಿದ ಬಿಲ್ಲುಗಳಿಗೆ ಮೇಲು ರುಜು ಮಾಡಲು ಅಧಿಕೃತಗೊಳಿಸಲಾಗಿದೆ. ಸದರಿ ಸಹಾಯಾನುದಾನದ ಬಿಲ್ಲುಗಳನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 2 ಎಫ್‌ಆರ್‌ಸಿ 2003, ದಿನಾಂಕ: 27.12.2004ರ ಸರ್ಕಾರಿ ಆದೇಶದಲ್ಲಿನ ಸೂಚನೆಗಳನ್ವಯ ಅನುದಾನದ ಬಿಲ್ಲುಗಳಿಗೆ ಕಾಲೇಜು ಶಿಕ್ಷಣ ಇಲಾಖೆಯ ಸಂಬಂಧಿತ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು ಸಂಬಂಧಿತ ಜಿಲ್ಲಾಧಿಕಾರಿಗಳು ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನಾಧಿಕಾರಿಗಳಿಗೆ/ಜಿಲ್ಲಾ ಖಜಾನಾಧಿಕಾರಿಗಳಿಗೆ ಕಳುಹಿಸಿ ಚೆಕ್‌ನ್ನು ಪಡೆದು ಸಂಬಂಧಿತ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳಿಗೆ/ಸಂಬಂಧಿತ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಕಳುಹಿಸತಕ್ಕದ್ದು.

- ಸಂಬಂಧಿತ ವಿಶ್ವವಿದ್ಯಾಲಯ/ಸಂಸ್ಥೆಗೆ 2020-21ನೇ ಸಾಲಿಗೆ ಬಿಡುಗಡೆ ಮಾಡಲಾದ ಅನುದಾನದ ಮೊತ್ತದ ಓಚರ್ ಸಂಖ್ಯೆ ಇತ್ಯಾದಿ ವಿವರಗಳನ್ನು ಸಂಬಂಧಿಸಿದ ಖಜಾನೆಯಿಂದ ಪಡೆದು ಮಹಾಲೇಖಪಾಲರ ಕಛೇರಿಯ ಅಂಕಿಗಳೊಂದಿಗೆ ಮರು ಹೊಂದಾಣಿಕೆ ಮಾಡಿ ರೆಕಾನ್ಸಿಲಿಯೇಷನ್ (Reconciliation) ಪ್ರಮಾಣ ಪತ್ರವನ್ನು ಸಲ್ಲಿಸುವುದು. ಇದಕ್ಕೆ ಸಂಬಂಧಿಸಿದ ಯಾವುದೇ ಲೋಪದೋಷಗಳಿದ್ದಲ್ಲಿ ಸರಿಪಡಿಸಿಕೊಳ್ಳತಕ್ಕದ್ದು. ಅಲ್ಲದೆ ಮಹಾಲೇಖಪಾಲರು ವೆಚ್ಚಗಳನ್ನು ಪ್ರವರ್ಗೀಕರಿಸುವಾಗ ಮತ್ತು ಮರುಹೊಂದಾಣಿಕೆ ಮಾಡುವ ಸಂದರ್ಭಗಳಲ್ಲಿ ಸಂಬಂಧಿಸಿದ ವಿಶ್ವವಿದ್ಯಾಲಯ ಪರಿಶೀಲಿಸುವುದು.

- ವೇತನಕ್ಕೆ ಸಂಬಂಧಿಸಿದಂತೆ, ಸರ್ಕಾರವು ಬಿಡುಗಡೆ ಮಾಡಿದ ಅನುದಾನಕ್ಕೆ ವೆಚ್ಚದ ವಿವರವನ್ನು ಪ್ರತ್ಯೇಕವಾಗಿ ಇಡತಕ್ಕದ್ದು, ನಗದು ಪುಸ್ತಕದಲ್ಲಿ ವೇತನದ ವೆಚ್ಚವನ್ನು ಪ್ರತ್ಯೇಕವಾಗಿ ನಮೂದಿಸುವುದು. ಸಂಬಂಧಿತ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ನಮೂದಿಸಿ ಈ ಪ್ರತಿಗಳೊಂದಿಗೆ ಬಿಡುಗಡೆ ಮಾಡಿದ ಅನುದಾನಕ್ಕೆ ಉಪಯೋಗಿತ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರ ಮುಂದಿನ ಕಂತಿನ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

- ಸಮ ಸಂಖ್ಯೆಯ ದಿನಾಂಕ: 08.07.2020ರ ಪತ್ರದಲ್ಲಿ 2020-21ನೇ ಸಾಲಿಗೆ ಆಯಾ ವಿಶ್ವವಿದ್ಯಾಲಯಕ್ಕೆ ಎಸ್.ಸಿ.ಪಿ/ಟಿ.ಎಸ್.ಪಿ ಅಡಿ ನಿಗದಿಪಡಿಸಿ ಹಂಚಿಕೆ ಮಾಡಿದ ಆಯ್ಯವಯದ ಮಿತಿಯಲ್ಲಿಯೇ ಪರಿಷತ್ ಅನುಮೋದಿಸಿದ ಯಾವುದಾದರೂ/ಎಲ್ಲಾ ಕಾರ್ಯಕ್ರಮಗಳನ್ನು ಮಾತ್ರ ಅನುಷ್ಠಾನಗೊಳಿಸುವುದು. ನಿಗದಿಪಡಿಸಿದ

Scanned with CamScanner

ಆಯವ್ಯಯ ಮೀರಿ ವೆಚ್ಚ ಭರಿಸಿದ್ದಲ್ಲಿ ನಿಯಮಾನುಸಾರ ಅನುಷ್ಠಾನ ಅಧಿಕಾರಿಗಳನ್ನೇ ಜವಾಬ್ದಾರರಾಗಿಸಿ ಸೂಕ್ತ ಕ್ರಮ ಜರುಗಿಸಲಾಗುವುದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2020, ದಿನಾಂಕ: 30.05.2020ರಲ್ಲಿ ಇಲಾಖಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಎನ್.ಆರ್. ಎರಕುಪ್ಪಿ)
ಆಂತರಿಕ ಆರ್ಥಿಕ ಸಲಹೆಗಾರರು
ಹಾಗೂ ಉಪಕಾರ್ಯದರ್ಶಿಗಳು (ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

ಇವರಿಗೆ

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ [ಎ&ಇ], ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿಗಳು, ವಿಶ್ವವಿದ್ಯಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಎಲ್ಲಾ ವಿಶ್ವವಿದ್ಯಾಲಯದ ಉಪ ಕುಲಪತಿಗಳು ಹಾಗೂ ಕುಲಸಚಿವರುಗಳಿಗೆ (ವಿಶ್ವವಿದ್ಯಾಲಯಗಳ ಸರ್ಕಾರದ ಅಧೀನ ಕಾರ್ಯದರ್ಶಿಗಳು 1&2 ಇವರುಗಳ ಮುಖಾಂತರ).
4. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
6. ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು (ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕರ ಮುಖಾಂತರ).
7. ಲೆಕ್ಕಾಧಿಕಾರಿಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
8. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯಗೋಪುರ, ಬೆಂಗಳೂರು.
9. ಉಪ-ನಿರ್ದೇಶಕರು, ಖಜಾನೆ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
10. ಸರ್ಕಾರದ ಜಂಟಿ ಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
12. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿಗಳು.
14. ಸಮನ್ವಯಾಧಿಕಾರಿ, ಮಾಹಿತಿಕೇಂದ್ರ ಶಿಕ್ಷಣ ಇಲಾಖೆ, ಬೆಂಗಳೂರು.
15. ಹೆಚ್ಚಿನ ಪ್ರತಿ/ರಕ್ಷಾ ಕಡತ/ ಕಡತ ಪ್ರತಿ.

Scanned with CamScanner

**ಕರ್ನಾಟಕ ಸರ್ಕಾರ**

**ಸರ್ಕಾರಿ ಆದೇಶ ಸಂಖ್ಯೆ: ಇಡಿ 85 ಹೆಚ್‌ಪಿಯು 2020,ಬೆಂಗಳೂರು, ದಿನಾಂಕ:03.08.2020ಕ್ಕೆ ಅನುಬಂಧ**

**ವಿಶ್ವವಿದ್ಯಾಲಯಗಳಲ್ಲಿ ಅನುಸೂಚಿತ ಜಾತಿ/ಅನುಸೂಚಿತ ಪಂಗಡಗಳ ಅನುಮೋದಿತ ಕಾರ್ಯಕ್ರಮ ಅನುಷ್ಠಾನಗೊಳಿಸಲು ಮೊದಲನೇ ತ್ರೈಮಾಸಿಕ ಕಂತಿನಲ್ಲಿ ಬಿಡುಗಡೆ ಮಾಡಿದ ಅನುದಾನದ ವಿವರ**

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವಿಶ್ವವಿದ್ಯಾಲಯಗಳ ಹೆಸರು / ಪ್ರಧಾನ ಶೀರ್ಷಿಕೆ | ಸ-ವಿವರ ಉಪ ಶೀರ್ಷಿಕೆ | ನಿಗದಿಪಡಿಸಿದ ಎಸ್.ಸಿ.ಪಿ / ಟಿ.ಎಸ್.ಪಿ. ಅನುದಾನ | ಮೊದಲನೇ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡಿದ ಎಸ್.ಸಿ.ಪಿ /ಟಿ.ಎಸ್.ಪಿ. ಅನುದಾನ |
|---|---|---|---|---|
| 1 | ಕರ್ನಾಟಕ ವಿಶ್ವವಿದ್ಯಾಲಯ 2202-03-102-0-02 | 422-ಪರಿಶಿಷ್ಟ ಜಾತಿ ಉಪ ಯೋಜನೆ | 17.00 | 4.25 |
| | | 423-ಗಿರಿಜನ ಉಪ ಯೋಜನೆ. | 8.00 | 2.00 |
| 2 | ಬೆಂಗಳೂರು ವಿಶ್ವವಿದ್ಯಾಲಯ 2202-03-102-0-03 | 422-ಪರಿಶಿಷ್ಟ ಜಾತಿ ಉಪ ಯೋಜನೆ | 17.00 | 4.25 |
| | | 423-ಗಿರಿಜನ ಉಪ ಯೋಜನೆ. | 8.00 | 2.00 |
| 3 | ಗುಲ್ಬರ್ಗಾ ವಿಶ್ವವಿದ್ಯಾಲಯ 2202-03-102-0-04 | 422-ಪರಿಶಿಷ್ಟ ಜಾತಿ ಉಪ ಯೋಜನೆ | 17.00 | 4.25 |
| | | 423-ಗಿರಿಜನ ಉಪ ಯೋಜನೆ. | 8.00 | 2.00 |
| 4 | ಮಂಗಳೂರು ವಿಶ್ವವಿದ್ಯಾಲಯ 2202-03-102-0-05 | 422-ಪರಿಶಿಷ್ಟ ಜಾತಿ ಉಪ ಯೋಜನೆ | 17.00 | 4.25 |
| | | 423-ಗಿರಿಜನ ಉಪ ಯೋಜನೆ. | 8.00 | 2.00 |
| 6 | ಕುವೆಂಪು ವಿಶ್ವವಿದ್ಯಾಲಯ 2202-03-102-0-08 | 422-ಪರಿಶಿಷ್ಟ ಜಾತಿ ಉಪ ಯೋಜನೆ | 33.00 | 8.25 |
| | | 423-ಗಿರಿಜನ ಉಪ ಯೋಜನೆ. | 17.00 | 4.25 |
| 7 | ಅಕ್ಕಮಹಾದೇವಿಮಹಿಳಾ ವಿಶ್ವವಿದ್ಯಾಲಯ 2202-03-102-0-22 | 422-ಪರಿಶಿಷ್ಟ ಜಾತಿ ಉಪ ಯೋಜನೆ | 33.00 | 8.25 |
| | | 423-ಗಿರಿಜನ ಉಪ ಯೋಜನೆ. | 17.00 | 4.25 |
| 8 | ತುಮಕೂರು ವಿಶ್ವವಿದ್ಯಾಲಯ 2202-03-102-0-23 | 422-ಪರಿಶಿಷ್ಟ ಜಾತಿ ಉಪ ಯೋಜನೆ | 33.00 | 8.25 |
| | | 423-ಗಿರಿಜನ ಉಪ ಯೋಜನೆ. | 17.00 | 4.25 |
| 9 | ದಾವಣಗೆರೆ ವಿಶ್ವವಿದ್ಯಾಲಯ: 2202-03-102-0-31 | 422-ಪರಿಶಿಷ್ಟ ಜಾತಿ ಉಪ ಯೋಜನೆ | 33.00 | 8.25 |
| | | 423-ಗಿರಿಜನ ಉಪ ಯೋಜನೆ. | 17.00 | 4.25 |
| 10 | ವಿಜಯನಗರ ವಿಶ್ವವಿದ್ಯಾಲಯ 2202-03-102-0-33 | 422-ಪರಿಶಿಷ್ಟ ಜಾತಿ ಉಪ ಯೋಜನೆ | 33.00 | 8.25 |
| | | 423-ಗಿರಿಜನ ಉಪ ಯೋಜನೆ. | 17.00 | 4.25 |
| 11 | ಬೆಳಗಾವಿ ವಿಶ್ವವಿದ್ಯಾಲಯ 2202-03-102-0-34 | 422-ಪರಿಶಿಷ್ಟ ಜಾತಿ ಉಪ ಯೋಜನೆ | 33.00 | 8.25 |
| | | 423-ಗಿರಿಜನ ಉಪ ಯೋಜನೆ. | 17.00 | 4.25 |
| 12 | ಜನಪದ ವಿಶ್ವವಿದ್ಯಾಲಯ 2202-03-102-0-35 | 422-ಪರಿಶಿಷ್ಟ ಜಾತಿ ಉಪ ಯೋಜನೆ | 33.00 | 8.25 |
| | | 423-ಗಿರಿಜನ ಉಪ ಯೋಜನೆ. | 17.00 | 4.25 |
| 13 | ಬೆಂಗಳೂರು - ಕೇಂದ್ರ ವಿಶ್ವವಿದ್ಯಾಲಯ 2202-03-102-0-39 | 422-ಪರಿಶಿಷ್ಟ ಜಾತಿ ಉಪ ಯೋಜನೆ | 33.00 | 8.25 |
| | | 423-ಗಿರಿಜನ ಉಪ ಯೋಜನೆ. | 17.00 | 4.25 |
| 14 | ಬೆಂಗಳೂರು- ಉತ್ತರ ವಿಶ್ವವಿದ್ಯಾಲಯ 2202-03-102-0-40 | 422-ಪರಿಶಿಷ್ಟ ಜಾತಿ ಉಪ ಯೋಜನೆ | 67.00 | 16.75 |
| | | 423-ಗಿರಿಜನ ಉಪ ಯೋಜನೆ. | 33.00 | 8.25 |

(ಎನ್.ಆರ್. ಎರೆಕುಪ್ಪಿ)
ಆಂತರಿಕ ಆರ್ಥಿಕ ಸಲಹೆಗಾರರು
ಹಾಗೂ ಉಪಕಾರ್ಯದರ್ಶಿಗಳು (ಯೋಜನೆ)
ಉನ್ನತ ಶಿಕ್ಷಣ ಇಲಾಖೆ.

Scanned with CamScanner